ನೀವು ಮುಶ್ರಿಕರೊಡನೆ ನಿಮ್ಮ ಸಂಪತ್ತು, ನಿಮ್ಮ ಪ್ರಾಣ ಮತ್ತು ನಿಮ್ಮ ನಾಲಿಗೆಯಿಂದ ಜಿಹಾದ್ ಮಾಡಿರಿ

ಅನಸ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನೀವು ಮುಶ್ರಿಕರೊಡನೆ ನಿಮ್ಮ ಸಂಪತ್ತು, ನಿಮ್ಮ ಪ್ರಾಣ ಮತ್ತು ನಿಮ್ಮ ನಾಲಿಗೆಯಿಂದ ಜಿಹಾದ್ ಮಾಡಿರಿ."
[صحيح] [رواه أبو داود والنسائي وأحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಸತ್ಯನಿಷೇಧಿಗಳೊಡನೆ ಜಿಹಾದ್ ಮಾಡಲು ಮತ್ತು ಅಲ್ಲಾಹನ ವಚನವು ಅತ್ಯುನ್ನತವಾಗಬೇಕೆಂಬ ಉದ್ದೇಶದಿಂದ ಅವರನ್ನು ಎದುರಿಸಲು ಸಾಧ್ಯವಿರುವ ಎಲ್ಲ ವಿಧಾನಗಳಿಂದಲೂ ಪರಿಶ್ರಮಿಸಬೇಕೆಂದು ಆದೇಶಿಸಿದರು. ಅವುಗಳಲ್ಲಿ ಕೆಲವು ಹೀಗಿವೆ: ಮೊದಲನೆಯದಾಗಿ: ಅವರೊಡನೆ ಜಿಹಾದ್ ಮಾಡಲು ಸಂಪತ್ತನ್ನು ಖರ್ಚು ಮಾಡುವುದು. ಉದಾಹರಣೆಗೆ, ಶಸ್ತ್ರಾಸ್ತ್ರಗಳನ್ನು ಖರೀದಿಸುವುದು, ಜಿಹಾದ್ ಮಾಡುವವರ ವೆಚ್ಚ ಭರಿಸುವುದು ಇತ್ಯಾದಿ. ಎರಡನೆಯದಾಗಿ: ಅವರನ್ನು ಎದುರಿಸಲು ಮತ್ತು ಅವರನ್ನು ತಡೆಯಲು ಪ್ರಾಣ ಮತ್ತು ದೇಹದೊಂದಿಗೆ ಸ್ವತಃ ಹೊರಡುವುದು. ಮೂರನೆಯದಾಗಿ: ಅವರನ್ನು ನಾಲಿಗೆಯ ಮೂಲಕ ಈ ಧರ್ಮಕ್ಕೆ ಆಹ್ವಾನಿಸುವುದು, ಅವರ ಮೇಲೆ ಪುರಾವೆಗಳನ್ನು ಸ್ಥಾಪಿಸುವುದು, ಮತ್ತು ಅವರನ್ನು ಖಂಡಿಸುವುದು ಮತ್ತು ಅವರಿಗೆ ಪ್ರತ್ಯುತ್ತರ ನೀಡುವುದು.

http://sunnah.global/hadeeth/kn/show/64597